ಕ್ಷೇತ್ರಗಳಲ್ಲಿ ಈಗಾಗಲೇ ಈ ಕಾರ್ಯಕ್ರಮವಾಗಿದೆ. ನಮ್ಮ ಎರಡು ಕ್ಷೇತ್ರಗಳಲ್ಲಿ ಮಾತ್ರ ಆಗಿಲ್ಲ ಮತ್ತು ರಾಜ್ಯದಲ್ಲಿ ಇಷ್ಟೆಲ್ಲಾ ಹಣ ಉಪಯೋಗವಾದರೂ ಸಹ ಸರಿಯಾಗಿ ಪೂಜಾ ಮಂದಿರಗಳಿಗೆ ಉಪಯೋಗವಾಗುತ್ತಿಲ್ಲ. ಇದರ ಬಗ್ಗೆ ನಾವು ಆಕ್ಷೇಪವನ್ನು ಎತ್ತಿದ್ದೇವೆ. ಅನೇಕ ಬಾರಿ ಮಾನ್ಯ ಮಂತ್ರಿಗಳು ಇಲ್ಲದ ಕಾರಣ ನಾನು ಈಗ ತಮ್ಮ ಗಮನಕ್ಕೆ ತಂದಿದ್ದೇನೆ. ಇವತ್ತೂ ಸಹ ಅವರು ಇಲ್ಲ. ಬಹುಶ: ಅವರು ಮಾಯವಾಗಿದ್ದಾರೆ ಎಂದು ಕಾಣುತ್ತದೆ. ಅವರಿಂದ ಸರಿಯಾದಂಥ ಕಾರ್ಯಕ್ರಮವೂ ಸಹ ಆಗುತ್ತಿಲ್ಲ.

4.40 ಪಿ.ಎಂ.

ಶ್ರೀ ರಮೇಶ್. ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಮುಜರಾಯಿ ಇಲಾಖೆಯ ಸಚಿವರಾದ ಶ್ರೀಮಾನ್ ಮುನಿಯಪ್ಪ ಮುದ್ದಪ್ಪನವರಿಗೆ ಬರುತ್ತದೆ. ಆದರೂ ಸಹ ಸರ್ಕಾರದ ಪರವಾಗಿ ಇದನ್ನು ಸಚಿವರ ಗಮನಕ್ಕೆ ತಂದು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ : ಮೂರು ವರ್ಷಗಳಿಂದ ಉಡುಪಿ ಮತ್ತು ನನ್ನ ಎರಡು ಕ್ಷೇತ್ರಗಳಲ್ಲಿ ಆರಾಧನ ಸಮಿತಿಯಾಗಿರುವುದಿಲ್ಲ, ಕಳೆದ ಮೂರು ವರ್ಷಗಳಿಂದ ಅದನ್ನು ಮಾಡುತ್ತೇವೆಂದು ಹೇಳಿಕೊಂಡು ಬರುತ್ತಿದ್ದಾರೆ. ಅದರ ಬಗ್ಗೆ ಭರವಸೆಯನ್ನು ಇಲ್ಲಿ ಕೊಡುತ್ತಾರೆ. ಆದರೆ ಇದುವರೆಗೆ ಮಾಡಿಲ್ಲ.

ಅಧ್ಯಕ್ಷರು : ಸೋಮವಾರ ಮುಜರಾಯಿ ಸಚಿವರನ್ನು ಇಲ್ಲಿಗೆ ಕರೆಯಿಸುತ್ತೇನೆ. ಅಂದು ತಮ್ಮ ವಿಚಾರಕ್ಕೆ ಉತ್ತರ ಕೊಡಿಸುತ್ತೇನೆ.

ಹೆಚ್ಚಿನ ಮಳೆಯಿಂದ 41 ಮನೆಗಳು ನಾಶವಾಗಿ 24 ಜನರು ಬೀದಿ ಪಾಲು.

ಶ್ರೀ ನಾರಾಯಣ ರಾವ್ ಗೋವಿಂದರಾವ್ ತರಳೆ (ಬೆಳಗಾಂ) : ಮಾನ್ಯ ಅಧ್ಯಕ್ಷರೆ, I would like to bring to the kind attention of the Government due to rainfall in the Month of June, July and 1st August, nearly 41 houses totally collapsed. One Dalit family and his three brothers consisting of 24 members came on the road. I would request the Government to kindly look into the matter and as early as possible provide them relief through the appropriate channel. This is my personal request through the Hon'ble Speaker to the Government.

MR. SPEAKER : Who is answering this. Somebody should take up the responsibility.

SRI. R.V. DESHPANDE : Answer will be given tomorrow.

MR. SPEAKER : He is making a personal request. He is a hon.Member of this House.

ಶ್ರೀ ರಮೇಶ್. ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಳೆ ಜಾಸ್ತಿಯಾಗಿ ಯಾರದೋ ಜೀವದ ಹಾನಿಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬಾರದು, ತಾವು ಸರಿಯಾಗಿ ಕೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲೇನು ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ತರಿಸಿ ಅದಕ್ಕೆ ತೆಗೆದುಕೊಳ್ಳಬೇಕಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು : ಅವರು ಅಪರೂಪಕ್ಕೆ ಇಲ್ಲಿ ಎದ್ದು ಮಾತನಾಡುತ್ತಾರೆ, ಭಾಷೆಯ ಸಮಸ್ಯೆ ಇರುವುದರಿಂದ ಅವರು ಹೆಚ್ಚು ಮಾತನಾಡುವುದಿಲ್ಲ. ಅವರು ಬಹಳ ನೋವಿನಿಂದ ಹೇಳಿದ್ದಾರೆ. ತಾವು ದಯಮಾಡಿ ಅವರ ಪಕ್ಕದಲ್ಲಿ ಕುಳಿತುಕೊಂಡು ಅವರ ಸಮಸ್ಯೆಯನ್ನು ತಿಳಿದುಕೊಂಡು ಅದನ್ನು ಬಗೆಹರಿಸಿಕೊಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಆಗಲಿ ಮಾಡುತ್ತೇನೆ. We will give all respect to the member and to the Chair.

ಕರಾವಳಿಯ ಐದಾರೂ ಭಾಗಗಳಲ್ಲಿ ಬಾರ್ಜ್‌ಮೌಂಟ್ ಘಟಕಗಳಿಂದ ತ್ಯಾಜ್ಯ ಬಿಡುಗಡೆಯಾಗುತ್ತಿದ್ದು ಮೀನುಗಳಿಗೆ ತೊಂದರೆಯಾಗಿರುವುದು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ಕರಾವಳಿಯ ಐದಾರೂ ಭಾಗಗಳಲ್ಲಿ ಬಾರ್ಜ್‌ಮೌಂಟ್ ವಿದ್ಯುತ್ ಕೇಂದ್ರಗಳನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಹೇಳಿಕೆ ಕೊಟ್ಟಿತ್ತು. ಅದರಲ್ಲಿ ನನ್ನ ಕ್ಷೇತ್ರದ ಬೆಂಗೇರೆ ಎಂಬ ಕಡೆ ಸಹ ಮಾಡುವುದಿತ್ತು. ಬೆಂಗೇರೆ ಸೆಮಾರು ಹನ್ನೆರಡು ಸಾವಿರ ಜನಸಂಖ್ಯೆ ಇರುವ ಪ್ರದೇಶ. ಅವರುಗಳಲ್ಲಿ 90 ಭಾಗ ಜನರು ಮೀನುಗಾರಿಕೆಯನ್ನೇ ಅವಲಂಬಿಸಿದ್ದಾರೆ. ನನ್ನ ಕ್ಷೇತ್ರದ ಬೆಂಗೇರೆ ಮತ್ತು ತಣ್ಣೀರು ಬಾವಿ ಕೇವಲ ಒಂದು ಕಿಲೋಮೀಟರ್ ಅಂತರದಲ್ಲಿದೆ. ಈ ಎರಡೂ ಕಡೆಗಳಲ್ಲಿ ಬಾರ್ಜ್‌ಮೌಂಟ್ ವಿದ್ಯುತ್ ಕೇಂದ್ರ ಸ್ಥಾಪನೆ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆಯೆಂದು ಇತ್ತೀಚೆಗೆ ತಿಳಿದುಬಂದಿರುತ್ತದೆ. ಇದಕ್ಕೆ ಬಹಳಷ್ಟು ವಿರೋಧ ಬಂದಿದೆ. ಈ ಬಾರ್ಜ್‌ಮೌಂಟೆಡ್ ಘಟಕಗಳಿಂದ ತ್ಯಾಜ್ಯವು ಬಿಡುಗಡೆಯಾಗುತ್ತದೆ, ಅದು ನೀರಿನಲ್ಲಿ ತೇಲುತ್ತದೆ, ಮೀನುಗಳಿಗೆ ತೊಂದರೆಯಾಗುತ್ತದೆ. ನನ್ನ ಕ್ಷೇತ್ರದಲ್ಲೇ ಇದನ್ನು ಎರಡು ಕಡೆ ಮಾಡುತ್ತಿದ್ದಾರೆ. ಬಾರ್ಜ್‌ಮೌಂಟೆಡ್ ಬಗ್ಗೆ ಮಾತನಾಡುವುದಕ್ಕಿಂತ ಹೆಚ್ಚಾಗಿ ಅಕಾಲಿಕವಾಗಿ ಕೇವಲ ಎರಡು ತಿಂಗಳ ಹಿಂದೆ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಎರಡು ಕೇಂದ್ರಗಳನ್ನು ಮಾಡಿಕೊಂಡಿದ್ದಾರೆ. ಇದರಿಂದ ಮೀನುಗಾರಿಕೆಗೆ ತೀವ್ರವಾದ ತೊಂದರೆಯಾಗುತ್ತಿದೆ. ಶಬ್ಧಮಾಲಿನ್ಯವಾಗುತ್ತಿದೆ. ಜನಜೀವನ ಅವ್ಯವಸ್ಥೆ ಮಾಡುತ್ತಿದ್ದಾರೆ. ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಮಾಡಬೇಕಾಗಿದೆ.